**<u>ಸಾಕ್ಷಿಯನ್ನು ದಿನಾಂಕ *16.04.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾನು ಈಗ ನೋಡುತ್ತಿರುವ ನಿಪಿ–30 ರಲ್ಲಿ ಸದರಿ ನಕಾಶೆಯನ್ನು ಯಾವ ದಿನಾಂಕ, ತಿಂಗಳು ಮತ್ತು ಇಸವಿ ತಯಾರು ಮಾಡಿತ್ತು ಎಂದು ಬರೆದಿಲ್ಲ ಎಂದರೆ ಸರಿ. ಮಧುಸೂದನ್ ಎಂಬ ಪೊಲೀಸ್ ಪೇದೆ ನನಗೆ ಸ್ಥಳ ತೋರಿಸಿಲ್ಲ ಮತ್ತು ನಾನು ಸ್ಥಳ ಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಮತ್ತು ವೇಳೆಯಲ್ಲಿ ನಾನು ಸ್ಥಳ ಕ್ಕೆ ಹೋಗಿದ್ದೆ ಎಂದು ಈಗ ನೆನಪಲ್ಲಿ ಇರುವುದಿಲ್ಲ. ನಿಪಿ–37 ಅನ್ನು ಸ್ಥಳ ದಲ್ಲಿ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಸ್ಥಳ ದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯವರ ಕೋರಿಕೆ ಮೇರೆಗೆ ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ತನಿಖಾಧಿಕಾರಿಯವರು ಹೇಳಿದ ಪ್ರಕಾರ ನಕಾಶೆ ತಯಾರು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು